ಪದ್ಯ ಭಾಗ

## ಪದ್ಯಪಾಠ – ೦೧

# ಎಮ್ಮನುಡಿಗೇಳ್

– ಆದಿಕವಿ ಪಂಪ

**ಮುನ್ನಯಾರಿ :** ಕನ್ನಡ ಸಾಹಿತ್ಯ ಚರಿತ್ರೆಯಲ್ಲಿ ಕ್ರಿ.ಶ. ಹತ್ತನೆಯ ಶತಮಾನ ಸುವರ್ಣಯುಗ. ಪಂಪ, ರನ್ನ, ಪೊನ್ನರಂತಹ ಪ್ರತಿಭಾನ್ವಿತ ಕವಿಗಳು ಇದ್ದ ಕಾಲ. ನಮ್ಮ ದೇಶದ ಮಹಾಕಾವ್ಯಗಳಾದ ರಾಮಾಯಣ, ಮಹಾಭಾರತಗಳನ್ನು ಹೊಸದೃಷ್ಟಿಯಿಂದ ನೋಡಿದ ಕಾಲ. ಹೊಸ ದೃಷ್ಟಿಯಿಂದ ಮಹಾಕಾವ್ಯದ ದುಷ್ಟಪಾತ್ರಗಳನ್ನು ನೋಡುತ್ತ ಮಹಾಕಾವ್ಯವೊಂದನ್ನು ಪಂಪಮಹಾಕವಿ ನೀಡಿದ. ಹಿಂದೂ, ಜೈನ, ಬೌದ್ಧ ಯಾರೇ ಆಗಿರಲಿ "ಮಾತೃ ದೇವೋ ಭವ", "ಪಿತೃ ದೇವೋ ಭವ", "ಗುರು ದೇವೋ ಭವ" ಎಂಬ ನಿತ್ಯಮೌಲ್ಯಗಳನ್ನು ಮರೆಯಲಾಗದು. ಮಾತಾಪಿತೃಗಳು, ಗುರುಹಿರಿಯರು ತಮ್ಮ ಪ್ರೀತಿಪಾತ್ರರ ಬಗೆಗೆ ಎಂತಹ ಆಸೆಯನ್ನು ಹೊಂದಿರುತ್ತಾರೆ ಎಂಬುದು ತುಂಬ ಮಹತ್ತ್ವದ್ದು.
ವೃದ್ಧರೂ ಅಂಧರೂ ಆದ ಧೃತರಾಷ್ಟ್ರ ಗಾಂಧಾರಿಯರು ಸಮರೋತ್ಸಾಹದಲ್ಲಿದ್ದ ದುರ್ಯೋಧನನನ್ನು ಸಂಧಾನಕ್ಕೆ ಒಪ್ಪಿಕೋ ಎಂದು ಪ್ರಾರ್ಥಿಸುವ ಪ್ರಸಂಗವೆ ಪ್ರಸ್ತುತ ಕಾವ್ಯಭಾಗ.

**ಅರ್ಥೈಸಿ ಓದಿ**

**ಉತ್ತಮಾಂಗ ಪರಿಷೇಕ ಬಾಷ್ಪವಾರಿ ಪಚ್ಚಾಳ್ವಮ್ ಘಟಸಂಭೂತ ಗಾಂಡಿವಿ ಕುರುಕುಳನಂದನ ಪವನನಂದನ ಮದಾಂಧಗಂಧಸಿಂಧುರ.**

ವ ॥ ಎಂಬೆನ್ನಗಮೆಯ್ದೆ ವಂದ ಪಿತೃದ್ವಂದ್ವ ಚರಣಕ್ಕೆ ವಿನಯವಿನಮಿತೋತ್ತಮಾಂಗ ನಾದನನಿರ್ವರುಂಪರಸಿತಡವರಿಸಿಯುಂ ತೆಬ್ಬರಿಸಿಯುಮಪ್ಪಿಕೊಳಪ್ಪಿಕೊಂಡಮೃತವರ್ಷಿ ಕರ ಪರಿಷೇಕದಿಂದೆ ಪುತ್ರಸ್ಪರ್ಶನಮಾಪ್ಯಾಯನಕೋಟಿಯಾಗೆ ಪುಳಕಿತಗಾತ್ರರುಮಾನಂದ ಬಾಷ್ಪವಾರಿ ಧಾರಾಪರಿಕಲಿತನೇತ್ರರುಮಾಗಿ ಕಿಱದಾನುಂ ಬೇಗಮಿರ್ದಲ್ಲಿ ಕಾರ್ಯವ್ಯಗ್ರ ಪಾಪಿಪಾಶಾಶ್ರಿತರೆಲ್ಲರುಂ ಕೇಳಲೆಂದು ಮಹೀಭುಜನಿಂತೆಂದಂ–

ಮ ॥ ಎನಗಂ ಪಾಂಡುಗಮಿಲ್ಲ ಭೇದಮಿಳೆಯಂ ಪಚ್ಚಾಳ್ವಮಾ ಪಾಂಡುನಂ
ದನರುಂ ಸೈದರೆ ನಿನ್ನೊಳೀ ಕಲಹಮುಂ ನಿನ್ನಿಂದಮಾಯ್ತೆಂದೊಡಿಂ ।
ಮುನಿವೈ ಗಂಗೆಯ ಪೆರ್ಮಗಂಗೆ ಘಟಸಂಭೂತಂಗೆ ಕರ್ಣಂಗಸಾ
ಧ್ಯನೊಳಾ ಗಾಂಡಿವಿಯೊಳ್ ಕಱುತ್ತಿಱಿವರಾರಿಂ ಮಾಡುವಂ ಸಂಧಿಯಂ ॥

ಹರಿಣಿ॥ ಪಗೆಗೆ ಕಣಿಯೊಂದುಂಟೇ ನಣ್ಪಿಂಗಮಾಗರಮುಂಟೆ ನೀಂ
ಬಗೆಯ ಪಗೆಯುಂ ನಣ್ಪುಂ ಕಯ್ಕೊಂಡ ಕಜ್ಜದಿನಲ್ತೆ ಪು ।
ಟ್ಟುಗುಮರಸುಗಳ್ಗೆಂದೀ ಸಂದರ್ಥಶಾಸ್ತ್ರದೊಳೇಕೆ ಪೇಟ್
ಮಗನೆ ನೆಗಟ್ದ್ರೈ ಕಾರ್ಯಂ ಮಿತ್ರಾದಿ ಕಾರಕಮೆಂಬುದಂ ॥

© KTBS not to be republished

ಕಂ ॥ ನೀನುಳ್ಳೊಡೆಲ್ಲರೊಳರೆಮ
ಗೇನುಮಟಿಲ್ ಮನದೊಳಿಲ್ಲದೆಂತೆನೆ ಮಗನೇ ।
ಭಾನುವೆ ಸಾಲದೆ ಪಗಲೆನಿ
ತಾನುಂ ದೀವಿಗೆಗಳುರಿದೊಡೇಂ ನಂದಿದೊಡೇಂ ॥

ವ ॥ ಅದಲ್ಲದೆಯುಂ ಪಾಂಡವರಪ್ಪೊಡೆನಗೆ ಪಾಂಡುರಾಜಂಗೆ ಬೆಸಕಯ್ಯುದೆನೆ ಬೆಸಕಯ್ವರೆಂದುದಂ ಮೀಱುವರಲ್ಲರವರನಾನೆಂತುಮೊಡಂಬಡಿಸಿ ನೀನೆಂದುದನೆನಿಸುವೆನಿದರ್ಕೆ ಮಾರ್ಕೊಳ್ಳದೊಡಂಬಡು ನಿನ್ನಂ ಕಯ್ಯನೊಡ್ಡಿ ಬೇಡಿದಪ್ಪೆನೆಂದ ಧೃತರಾಷ್ಟ್ರನ ನುಡಿಗನುಬಲಮಾಗಿ ಗಾಂಧಾರಿಯಿಂತೆಂದಳ್ –

ಚಂ ॥ ಕುರುಕುಳನಂದನಂ ಪವನನಂದನನೆಂಬ ಮದಾಂಧಗಂಧಸಿಂ
ಧುರಮೆ ಕಱುತ್ತು ಪಾಯೆ ಪಡಲಿಟ್ಟವೊಲಾದುದು ಪುಣ್ಯದೊಂದು ಪೆ ।
ರ್ಮರನುಱಿವಂತೆ ನೀನುಱಿದೆಯಿನ್ನಿಱಿವನ್ನರುಮಿಲ್ಲ ಮುತ್ತರುಂ
ಕುರುಡರುಮೆನ್ನದೆಮ್ಮ ನುಡಿಗೇಳ್ ಮಗನೇ ಬಗೆ ತಂದೆಗಿಂಬುಕೆಯ್ ॥

## ಕರ್ತೃ–ಭಾವ–ಆಕರ

ಪಂಪ ಮಹಾಕವಿ (ಕ್ರಿ.ಶ. ೯೪೧) ವೆಂಗಿ ಮಂಡಲದ ವೆಂಗಿಪಳು ಎಂಬ ಆಗ್ರಹಾರದವನು. ಕೃಷ್ಣಾ ಮತ್ತು ಗೋದಾವರಿ ನದಿಗಳ ನಡುವಿನ ಸ್ಥಳವಾದ ವೆಂಗಿಪಳು ನಿಸರ್ಗಸೌಂದರ್ಯದ ತಾಣ. ಚಾಲುಕ್ಯರ ಅರಿಕೇಸರಿಯ ಆಸ್ಥಾನಕವಿಯಾಗಿದ್ದ ಪಂಪ ಆದಿಪುರಾಣ ಮತ್ತು ವಿಕ್ರಮಾರ್ಜುನ ವಿಜಯ ಎಂಬ ಮಹಾಕಾವ್ಯಗಳ ಕರ್ತೃ. **ವಿಕ್ರಮಾರ್ಜುನ ವಿಜಯ** ಕಾವ್ಯಕ್ಕೆ **ಪಂಪಭಾರತ** ಎಂಬ ಮತ್ತೊಂದು ಹೆಸರಿದೆ. ಕಲಿಯೂ ಕವಿಯೂ ಆಗಿದ್ದ ಪಂಪ ರತ್ನತ್ರಯರಲ್ಲಿ ಒಬ್ಬ. **ಸರಸ್ವತೀ ಮಣಿಹಾರ, ಸಂಸಾರ ಸಾರೋದಯ, ಕವಿತಾಗುಣಾರ್ಣವ** ಎಂಬ ಬಿರುದುಗಳನ್ನು ಪಡೆದಿದ್ದ ಕವಿ.

* * * *

ವೇದವ್ಯಾಸರ ಮಹಾಭಾರತವನ್ನು ಆಧರಿಸಿ ವಿಕ್ರಮಾರ್ಜುನ ವಿಜಯ ಎಂಬ ಕನ್ನಡ ಮಹಾಕಾವ್ಯವನ್ನು ಬರೆದ ಪಂಪಮಹಾಕವಿ ಅರಿಕೇಸರಿಯನ್ನು ಅರ್ಜುನನಿಗೆ ಹೋಲಿಸಿದ್ದಾನೆ. ಇದೊಂದು ಲೌಕಿಕ ಕಾವ್ಯವೆಂದು ಘೋಷಿಸಿದ್ದಾನೆ.

"ಪುತ್ರಶೋಕನಿರಂತರಂ" ಎಂಬ ಮಾತಿದೆ. ತಂದೆ–ತಾಯಿ ಮಕ್ಕಳ ಸಂಬಂಧ ಅಂತಃಕರಣ ಮಿಡಿಯುವಂಥದ್ದು. ಯುದ್ಧ ಅನಿವಾರ್ಯವೆನಿಸಿದರೂ ಮಕ್ಕಳನ್ನು ಕಳೆದುಕೊಂಡ ತಂದೆ, ತಾಯಿಯ ದುಃಖ ತೀವ್ರವಾದುದು. ತೊಂಬತ್ತೊಂಬತ್ತು ಮಕ್ಕಳನ್ನು ಕಳೆದುಕೊಂಡ ವೃದ್ಧ ದಂಪತಿಗಳಾದ ಧೃತರಾಷ್ಟ್ರ ಮತ್ತು ಗಾಂಧಾರಿ ರಣರಂಗಕ್ಕೆ ಬಂದು ಪ್ರಾರ್ಥಿಸುವ ದೃಶ್ಯ ಹೃದಯವಿದ್ರಾವಕವಾದುದು. ಉಳಿದಿರುವ ದುರ್ಯೋಧನನೊಬ್ಬನಾದರೂ ಬದುಕಲಿ ಎಂಬ ಭಾವ ಅವರನ್ನು ಆವರಿಸಿದೆ. ಯುದ್ಧ, ದ್ವೇಷ, ಅಸೂಯೆ, ಕೀರ್ತಿಯ ಬೆನ್ನ ಹಿಡಿದು ಹೋದರೆ ಎಂತಹ ಪರಿಣಾಮವನ್ನು ಎದುರಿಸಬೇಕಾಗುತ್ತದೆ, ಎಂಬುದು ಮಾರ್ಮಿಕವಾಗಿ ಚಿತ್ರಿತವಾಗಿದೆ.

* * * *

ಪಂಪಮಹಾಕವಿ ವಿರಚಿತ **ವಿಕ್ರಮಾರ್ಜುನ ವಿಜಯ** ಕಾವ್ಯವನ್ನು **ಡಿ. ಎಲ್. ನರಸಿಂಹಾಚಾರ್ಯರು** ಸಂಪಾದಿಸಿದ್ದು ಅದರ ತ್ರಯೋದರಾಶ್ವಾಸದಿಂದ **'ಎಮ್ಮನುಡಿಗೇಳ್'** ಪದ್ಯಭಾಗವನ್ನು ಆಯ್ಕೆ ಮಾಡಲಾಗಿದೆ.

© KTBS not to be republished

## ಪೂರ್ವಕಥೆ

ದಾಯಾದಿ ಮತ್ಸರ ಮತ್ತು ಛಲದಿಂದಾಗಿ ಕೌರವನು ಯುದ್ಧವನ್ನೇ ಬಯಸಿದ ಕಾರಣ ಮಹಾಭಾರತ ಯುದ್ಧ ಅನಿವಾರ್ಯವಾಯ್ತು, ಕೌರವನ ಹನ್ನೊಂದು ಅಕ್ಷೋಹಿಣಿ ಸೈನ್ಯ ಪಾಂಡವರ ಏಳು ಅಕ್ಷೋಹಿಣಿ ಸೈನ್ಯದೊಳಗೆ ನಡೆದ ಹದಿನೆಂಟು ದಿನಗಳ ಯುದ್ಧದಲ್ಲಿ ಮೊದಲ ಹತ್ತುದಿನ ಭೀಷ್ಮನ ಸೇನಾಧಿಪತ್ಯದಲ್ಲಿ, ಅನಂತರದ ಐದು ದಿನ ದ್ರೋಣರ ಸೇನಾಧಿಪತ್ಯದಲ್ಲಿ, ಎರಡು ದಿನ ಕರ್ಣನ ಸೇನಾಧಿಪತ್ಯದಲ್ಲಿ ಯುದ್ಧ ನಡೆದು ಕರ್ಣನ ಅವಸಾನದೊಂದಿಗೆ ಕೌರವನ ಹನ್ನೊಂದು ಅಕ್ಷೋಹಿಣಿ ಸೈನ್ಯದಲ್ಲಿ ಹತ್ತು ಅಕ್ಷೋಹಿಣಿ ಸೈನ್ಯ ಸಹಿತ ಅವನ ತೊಂಬತ್ತೊಂಬತ್ತು ಸಹೋದರರು ಸಾವನ್ನಪ್ಪಿದರು. ಕರ್ಣನ ಸಾವನ್ನು ಕಂಡು ಕಂಗಾಲಾದ ಕೌರವ ತನ್ನ ರಥದಲ್ಲಿ ಮೂರ್ಛೆ ಹೋದುದನ್ನು ಗಮನಿಸಿದ ಅಶ್ವತ್ಥಾಮ, ಕೃಪ, ಕೃತವರ್ಮ, ಶಕುನಿ ಇವರು ಶಿಬಿರಕ್ಕೆ ಕರೆದುಕೊಂಡು ಹೋದರು. ಶೈತ್ಯೋಪಚಾರದಿಂದ ಎಚ್ಚೆತ್ತ ದುರ್ಯೋಧನನು ಕರ್ಣನ ಸಾವಿಗಾಗಿ ಪ್ರಲಾಪಿಸುತ್ತಿರುವಾಗ ತಂದೆ ತಾಯಿಗಳಾದ ಧೃತರಾಷ್ಟ್ರ, ಗಾಂಧಾರಿ ತನ್ನೆಡೆಗೆ ಬರುತ್ತಿದ್ದಾರೆಂದು ತಿಳಿದು ಅವರನ್ನು ಹೇಗೆ ಸಂತೈಸಲಿ ಎಂದು ಚಿಂತಿಸುತ್ತಿರುವಾಗ, ಉಳಿದಿರುವ ಒಬ್ಬ ಮಗನನ್ನಾದರೂ ಉಳಿಸಿಕೊಳ್ಳಬೇಕೆಂಬ ಹಂಬಲದಿಂದ ಧೃತರಾಷ್ಟ್ರ, ಗಾಂಧಾರಿ ಸುಯೋಧನನ ಶಿಬಿರಕ್ಕೆ ಬಂದು ಬುದ್ಧಿವಾದ ಹೇಳುವ ಸನ್ನಿವೇಶವೇ ಈ ಪದ್ಯಭಾಗ.

### ಪದವಿಂಗಡಣಾ ಓದು

ವ॥ ಎಂಬೆ+ಅನ್ನೆಗಮ್+ಎಯ್ದೆ ವಂದ ಪಿತೃದ್ವಂದ್ವ ಚರಣಕ್ಕೆ ವಿನಯ ವಿನಮಿತ+ಉತ್ತಮ+ಅಂಗನ್+ಆದನನ್ ಇರ್ವರುಂ ಪರಸಿ ತಡವರಿಸಿಯುಂ ತೆಬ್ಬರಸಿಯುಂ+ಅಟ್ಕ(ಳ್ಕ)ಜೊ(ರೊ)ಳ್+ಅಪ್ಪಿಕೊಂಡು ಅಮೃತ ವರ್ಷಿ ಕರ ಪರಿಷೇಕದಿಂದೆ ಪುತ್ರಸ್ಪರ್ಶನಮ್+ಆಪ್ಯಾಯನ ಕೋಟಿ+ಆಗೆ ಪುಳಕಿತ ಗಾತ್ರರುಮ್ ಆನಂದ ಬಾಷ್ಪವಾರಿಧಾರಾ ಪರಿಕಲಿತ ನೇತ್ರರುಮ್+ಆಗಿ ಕಿಱ(ರಿ)ದು+ಆನುಮ್+ಬೇಗಮ್+ಇರ್ದು+ಅಲ್ಲಿ ಕಾರ್ಯವ್ಯಗ್ರ ಪಾಪಿಪಾಶ+ಆಶ್ರಿತರೆಲ್ಲರುಂ ಕೇಳಲೆಂದು ಮಹೀಭುಜನ್+ಇಂತು+ಎಂದಂ.

ಮ॥ ಎನಗಂ ಪಾಂಡುಗಮ್+ಇಲ್ಲ ಭೇದಮ್+ಇಳೆಯಂ ಪಚ್ಚಿ+ಆಳ್ವಮ್+ಆ ಪಾಂಡುನಂದನರುಂ ನೈದರೆ ನಿನ್ನೊಳ್+ಈ ಕಲಹಮುಂ ನಿನ್ನಿಂದಮ್+ಆಯ್ತು+ಎಂದೊಡೆ+ಇಂ ಮುನಿವೈ, ಗಂಗೆಯ ಪೆರ್ಮಗಂಗೆ ಘಟಸಂಭೂತಂಗೆ ಕರ್ಣಂಗೆ+ಅಸಾಧ್ಯನೊಳ್+ಆ ಗಾಂಡಿವಿಯೊಳ್ ಕಱು(ರು)ತ್ತು+ಇಱ(ರಿ)ವರ್ ಆರ್+ಇಂ+ ಮಾಡುವಂ+ಸಂಧಿಯಂ.

ಹರಿಣಿ॥ ಪಗೆಗೆ ಕಣಿ+ಒಂದು+ಉಂಟೇ, ನಣ್ಪಿಂಗಮ್+ಆಗರಮ್+ಉಂಟೆ, ನೀಂ ಬಗೆಯ, ಪಗೆಯುಂ ನಣ್ಪುಂ ಕಯ್ಕೊಂಡ ಕಜ್ಜದಿನ್+ಅಲ್ತೆ ಪುಟ್ಟುಗುಮ್+ಅರಸುಗಳ್ಗೆ+ಎಂದು+ಈ ಸಂದ+ಅರ್ಥಶಾಸ್ತ್ರದೊಳ್+ಏಕೆ ಪೇಟ್‌ ಮಗನೆ ನೆಗಟ್ದೈ ಕಾರ್ಯಂ ಮಿತ್ರಾದಿ ಕಾರಕಮ್+ಎಂಬುದಂ.

ಕಂ॥ ನೀನ್+ಉಳ್ಳೊಡೆ+ಎಲ್ಲರ್+ಒಳರ್, ಎಮಗೆ+ಏನುವ್+ಅೞ(ಳ)ಲ್+ಮನದೊಳ್+ಇಲ್ಲ ಅದು+ಎಂತು+ಎನೆ ಮಗನೇ ಭಾನುವೆ ಸಾಲದೆ ಪಗಲ್+ಎನಿತು+ಆನುಂ ದೀವಿಗೆಗಳ್+ಉರಿದೊಡೆ+ಏಂ ನಂದಿದೊಡೆ+ಏಂ.

© KTBS not to be republished

ವ॥ ಅದು ಅಲ್ಲದೆಯುಂ ಪಾಂಡವರ್+ಅಪ್ಪೊಡೆ+ಎನಗೆ ಪಾಂಡುರಾಜಂಗೆ ಬೆಸಕಯ್ದುದನೆ ಬೆಸಕಯ್ವರ್, ಎಂದುದಂ ಮೀಱು(ರು)ವರ್+ಅಲ್ಲರ್ ಅವರನ್+ಆನ್+ಎಂತುವಮ್+ಒಡಂಬಡಿಸಿ ನೀನ್+ಎಂದುದನೆ+ಎನಿಸುವೆನ್+ಇದರ್ಕೆ ಮಾರ್ಕೊಳ್ಳದೆ+ಒಡಂಬಡು, ನಿನ್ನಂ ಕೈಯನ್+ಒಡ್ಡಿ ಬೇಡಿದಪ್ಪೆನ್+ಎಂದ ಧೃತರಾಷ್ಟ್ರನ ನುಡಿಗೆ ಅನುಬಲಮ್+ಆಗಿ ಗಾಂಧಾರಿ+ಇಂತು+ಎಂದಳ್.

ಚಂ॥ ಕುರುಕುಳನಂದನಂ ಪವನನಂದನನ್+ಎಂಬ ಮದಾಂಧಗಂಧಸಿಂಧುರಮೆ ಕಱು(ರು)ತ್ತು ಪಾಯೆ ಪಡಲಿಟ್ಟವೊಲ್+ಆದುದು ಪುಣ್ಯದೊಂದು ಪೆರ್ಮರನ್+ಉಱೆ(ಳಿ)ವಂತೆ ನೀನ್+ಉಱೆ(ಳಿ)ದೆಯ್ ಇನ್+ಇಱೆ(ರಿ)ವ+ಅನ್ನರುಮ್+ಇಲ್ಲ, ಮುತ್ತರುಂ ಕುರುಡರುಮ್+ಎನ್ನದೆ+ಎಮ್ಮ ನುಡಿ+ಕೇಳ್ ಮಗನೇ ಬಗೆ ತಂದೆಗೆ+ಇಂಬುಕೆಯ್

## ಪದ – ಅರ್ಥ

ವ॥ ಎಂಬೆನ್ನೆಗಮ್–ಎನ್ನುವಷ್ಟರಲ್ಲಿ, ಎಯ್ದೆ–ಸಮೀಪಕ್ಕೆ, ಪಿತೃ–ತಂದೆ, ದ್ವಂದ್ವ–ಎರಡು, ಉತ್ತಮಾಂಗ–ತಲೆ, ಪರಸಿ–ಹರಸಿ, ಅಕ್ಕರು–ಪ್ರೀತಿ, ವರ್ಷಿ–ಸುರಿಸು, ಪರಿಷೇಕ–ಅಭಿಷೇಕ, ನೇತ್ರ–ಕಣ್ಣು.

ಮ॥ ಭೇದ–ವ್ಯತ್ಯಾಸ, ಇಳೆ–ಭೂಮಿ, ಪಚ್ಚಿ–ಹಂಚಿ, ಸೈದರೆ–ಹೊಂದಿಕೊಂಡರೆ, ಕಲಹ–ಯುದ್ಧ, ಜಗಳ, ಮುನಿ–ಕೋಪಿಸು, ಪೆರ್ಮ–ಹಿರಿಯ, ಘಟ–ಗಡಿಗೆ, ಸಂಭೂತ–ಹುಟ್ಟಿದ, ಕಱುತ್ತು–ಕೋಪಗೊಂಡು, ಇಱೆ(ರಿ)ವರ್–ಯುದ್ಧಮಾಡುವವರು, ನೆಗೞ್–ಮಾಡು.

ಹರಿಣಿ॥ ಪಗೆ–ಶತ್ರು, ಕಣಿ–ಗಣಿ, ಆಶ್ರಯ; ನಣ್ಪು–ನಂಟು, ಆಗರ–ಮನೆ, ಕಜ್ಜ–ಕಾರ್ಯ, ಕಾರಕ–ಕಾರಣ

ವ॥ ಬೆಸಕೈ–ಹೇಳು, ಮಾರ್ಕೊಳ್ಳು–ಪ್ರತಿಯಾಡು, ಅನುಬಲ–ಬೆಂಬಲ(ಸಹಾಯಕ)

ಚಂ॥ ನಂದನ–ನಂದನವನ, ಪವನ–ವಾಯು, ಗಾಳಿ, ಮದ+ಅಂಧ–ಮದದಿಂದ ಕುರುಡಾದ, ಸಿಂಧುರ–ಆನೆ, ಪಾಯ್–ನುಗ್ಗು, ಇಱೆ(ರಿ)ವನ್ನರ್–ಯುದ್ಧ ಮಾಡುವವರು, ಇಂಬು–ಬೆಂಬಲ, ಮುತ್ತರ್–ಮುದುಕರು.

## ಪಠ್ಯಾಧಾರ ಟಿಪ್ಪಣಿ

**ಪಾಂಡು** : ಪಾಂಡವರ ತಂದೆ, ಧೃತರಾಷ್ಟ್ರನ ತಮ್ಮ, ಕಿಂದಮಮುನಿಯ ಶಾಪಕ್ಕೆ ಗುರಿಯಾಗಿ ಅಕಾಲಮರಣಕ್ಕೆ ಗುರಿಯಾಗುತ್ತಾನೆ.

**ಘಟಸಂಭೂತ** : ಘಟ–ಕುಂಭ, ಸಂಭೂತ–ಜನಿಸಿದವನು, ಕುಂಭದಲ್ಲಿ ಜನಿಸಿದವನು ದ್ರೋಣ. ಕುರುಪಾಂಡವರಿಗೆ ಬಿಲ್ವಿದ್ಯೆ ಕಲಿಸಿದವನು.

**ಗಾಂಡಿವಿ** : ಗಾಂಡಿವ (ಗಾಂಡೀವ) ಎಂಬ ಬಿಲ್ಲನ್ನು ಹೊಂದಿರುವವನು – ಗಾಂಡೀವಿ – ಅರ್ಜುನ

**ಅರ್ಥಶಾಸ್ತ್ರ** : ಸಂಪತ್ತು ನಿರ್ವಹಣೆಯನ್ನು ತಿಳಿಸುವ ಶಾಸ್ತ್ರ. ಕೌಟಿಲ್ಯನ ಅರ್ಥಶಾಸ್ತ್ರದಂತಹ ಗ್ರಂಥಗಳನ್ನು ಉದಾಹರಿಸಬಹುದು.

**ಪವನನಂದನ** : ಪವನ – ವಾಯು, ನಂದನ – ಮಗ, ವಾಯುವಿನ ವರಬಲದಿಂದ ಕುಂತಿಯಲ್ಲಿ ಜನಿಸಿದವನು – ಭೀಮಸೇನ.

**ಮದಾಂಧಗಂಧಸಿಂಧುರ** : ಮದ+ಅಂಧಗಂಧಸಿಂಧುರ, ಮದ – ಸೊಕ್ಕು ; ಅಂಧ – ಕುರುಡ ; ಗಂಧ ಸುವಾಸನೆ; ಸಿಂಧುರ–ಆನೆ = ಮದದಿಂದ ಕುರುಡಾದ ಆನೆ.

**ಹರಿಣಿ** : ಇದು ಅಕ್ಷರಗಣದಲ್ಲಿ ಬರುವ ವೃತ್ತ, ಖ್ಯಾತ ಕರ್ಣಾಟಕದಲ್ಲಿ ಇದು ಸೇರಿಲ್ಲ.

© KTBS not to be republished

## ಅಭ್ಯಾಸ

**ಅ. ಕೊಟ್ಟಿರುವ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿ.**

೧. ಭೀಮನಿಗೆ ಪವನನಂದನನೆಂದು ಹೆಸರುಬರಲು ಕಾರಣವೇನು ?

೨. ಘಟ ಸಂಭೂತ ಯಾರು?

೩. ಗಾಂಡೀವಿ ಎಂದು ಅರ್ಜುನನ್ನು ಏಕೆ ಕರೆಯುತ್ತಾರೆ.

೪. ಪಂಪ ಭಾರತದ ಇನ್ನೊಂದು ಹೆಸರೇನು?

**ಆ. ಕೊಟ್ಟಿರುವ ಪ್ರಶ್ನೆಗಳಿಗೆ ಎರಡು ಮೂರು ವಾಕ್ಯಗಳಲ್ಲಿ ಉತ್ತರಿಸಿ.**

೧. ಸಂಧಿಯೇ ಉಚಿತವೆಂದು ಧೃತರಾಷ್ಟ್ರನು ಹೇಗೆ ಸಮರ್ಥಿಸಿದನು?

೨. ದುರ್ಯೋಧನನಿಗೆ ಗಾಂಧಾರಿ ನೀಡಿದ ಉಪದೇಶವೇನು?

**ಇ. ಕೊಟ್ಟಿರುವ ಪ್ರಶ್ನೆಗಳಿಗೆ ಎಂಟು ಹತ್ತು ವಾಕ್ಯಗಳಲ್ಲಿ ಉತ್ತರಿಸಿ:**

೧. ಧೃತರಾಷ್ಟ್ರನು ಸಂಧಿಮಾಡಿಕೊ ಎಂದು ದುರ್ಯೋಧನನಿಗೆ ಹೇಳಲು ಕಾರಣವೇನು?

೨. ದುರ್ಯೋಧನನ ತಂದೆತಾಯಿಯರು ಅವನನ್ನು ಸಂಧಿಗಾಗಿ ಪ್ರಾರ್ಥಿಸಿದ ರೀತಿಯನ್ನು ವಿವರಿಸಿ.

**ಈ. ಸಂದರ್ಭ ಸಹಿತ ಸ್ವಾರಸ್ಯವನ್ನು ವಿವರಿಸಿ.**

೧. "ಎನಗಂ ಪಾಂಡುಗಮಿಲ್ಲ ಭೇದಂ"

೨. "ಈ ಕಲಹಮುಂ ನಿನ್ನಿಂದಮಾಯ್ತೆಂದೊಡಿಂ ಮುನಿವೈ"

೩. "ಪಗೆಗೆ ಕಣಿಯೊಂದುಂಟೇ"

೪. "ಪಗೆಯುಂ ನಣ್ಪುಂ ಕಯ್ಕೊಂಡ ಕಜ್ಜದಿನಲ್ತೆ."

೫. "ಪಗಲೆನಿತಾನುಂ ದೀವಿಗೆಗಳುರಿದೊಡೇಮ್."

೬. "ಪೆರ್ಮರನುಟಿವಂತೆ ನೀನುಟಿದೆ."

**ಉ. ಮೊದಲೆರಡು ಪದಗಳಿಗಿರುವ ಸಂಬಂಧದಂತೆ ಮೂರನೆಯ ಪದಕ್ಕೆ ಸಂಬಂಧಿಸಿದ ಪದ ಬರೆಯಿರಿ.**

೧. ಪಾಂಡು – ಕುಂತಿ : : ಧೃತರಾಷ್ಟ್ರ ______________

೨. ಗದಾಯುದ್ಧ – ರನ್ನ : : ವಿಕ್ರಮಾರ್ಜುನ ವಿಜಯ ______________

೩. ಬಾನು – ಆಕಾಶ : : ಭಾನು ______________

೪. ಕುರುಕುಳನಂದನ – ದುರ್ಯೋಧನ: : ಪವನನಂದನ ______________

೫. ಘಟಸಂಭೂತ – ದ್ರೋಣ : : ಗಾಂಡೀವಿ ______________

© KTBS not to be republished

# ಸೈದ್ಧಾಂತಿಕ ಭಾಷಾಭ್ಯಾಸ

## ಛಂದಸ್ಸು

ಶುದ್ಧ ಹಾಗೂ ಅರ್ಥಪೂರ್ಣವಾಗಿ ಮಾತನಾಡಲು, ಬರೆಯಲು ವ್ಯಾಕರಣ ಶಾಸ್ತ್ರವು ಹೇಗೆ ಅಗತ್ಯವೋ ಹಾಗೆಯೇ ಪದ್ಯರಚನೆ ಮಾಡಲೂ ಕೆಲವು ನಿಮಯಗಳಿರುತ್ತವೆ. ಇಂತಹ **ಪದ್ಯರಚನಾ ನಿಯಮವನ್ನು ಛಂದಸ್ಸು** ಎಂದು ಕರೆಯಲಾಗಿದೆ. ಸುಮಾರು ಕ್ರಿ.ಶ. ೯೯೦ರಲ್ಲಿ ಇದ್ದ **ಒಂದನೆಯ ನಾಗವರ್ಮ** ಎಂಬವನು **ಛಂದೋಂಬುಧಿ** ಎಂಬ ಗ್ರಂಥದ ಮೂಲಕ ಈ ಶಾಸ್ತ್ರವನ್ನು ನೀಡಿದ್ದಾನೆ. ಹಳಗನ್ನಡದ ಮತ್ತು ನಡುಗನ್ನಡದ ಪದ್ಯಕಾವ್ಯಗಳು ಈ ಶಾಸ್ತ್ರವನ್ನು ಅನುಸರಿಸಿಯೇ ಬರೆಯಲ್ಪಟ್ಟವು.

ಛಂದಶ್ಶಾಸ್ತ್ರವನ್ನು ಮೂರು ವಿಭಾಗಗಳಾಗಿ ವಿಂಗಡಿಸಲಾಗಿದೆ ಅವುಗಳನ್ನು **ಪ್ರಾಸ, ಯತಿ, ಗಣ**ಗಳೆಂದು ಕರೆಯಲಾಗಿದೆ.

**ಪ್ರಾಸ :** ಪದ್ಯದ ಪ್ರತಿ ಸಾಲಿನ ಒಂದು ಮತ್ತು ಎರಡನೆಯ ಸ್ವರಗಳ ಮಧ್ಯದಲ್ಲಿ ಒಂದೇ ಜಾತಿಯ ವ್ಯಂಜನವಿದ್ದರೆ ಅದನ್ನು **ಆದಿಪ್ರಾಸ** ವೆಂತಲೂ ಪ್ರತಿ ಪಾದದ ಕೊನೆಯಲ್ಲಿ ಒಂದೇ ಜಾತಿಯ ವ್ಯಂಜನವಿದ್ದರೆ ಅದನ್ನು **ಅಂತ್ಯಪ್ರಾಸ**ವೆಂತಲೂ ಕರೆಯುತ್ತಾರೆ. ಕೆಲವೊಮ್ಮೆ ಅಪರೂಪಕ್ಕೆ ಸಾಲಿನ ಮಧ್ಯದಲ್ಲಿ ಪ್ರಾಸಾಕ್ಷರಗಳು ಬರುವುದುಂಟು ಅದನ್ನು **ಒಳಪ್ರಾಸ** ಅಥವಾ **ಮಧ್ಯಪ್ರಾಸ** ಎಂದು ಕರೆಯಲಾಗಿದೆ.

ಪ್ರಾಸಾಕ್ಷರದ ಹಿಂದಿನ ಸ್ವರವು **ಹ್ರಸ್ವ**ವಾಗಿದ್ದರೆ ಅದನ್ನು **ಸಿಂಹಪ್ರಾಸ** ಎಂತಲೂ ಹಿಂದಿನ ಸ್ವರವು **ದೀರ್ಘ**ವಾಗಿದ್ದರೆ ಅದನ್ನು **ಗಜಪ್ರಾಸ** ಎಂತಲೂ ಹಿಂದೆ **ಅನುಸ್ವಾರ**ವಿದ್ದರೆ **ವೃಷಭಪ್ರಾಸ** ಎಂತಲೂ ಹಿಂದೆ **ವಿಸರ್ಗ**ವಿದ್ದರೆ **ಅಜಪ್ರಾಸ** ಎಂತಲೂ ಬೇರೆಬೇರೆ ಜಾತಿಯ ಎರಡು ಮೂರು ವ್ಯಂಜನಗಳು ಪ್ರಾಸಕ್ಷರಗಳಾಗಿದ್ದರೆ **ಶರಭಪ್ರಾಸ** ಎಂತಲೂ ಒಂದೇಜಾತಿಯ ಎರಡು ವ್ಯಂಜನಗಳು ಪ್ರಾಸಾಕ್ಷರಗಳಾಗಿದ್ದರೆ **ಹಯಪ್ರಾಸ** ಎಂತಲೂ ಕರೆಯಲ್ಪಡುವ ಆರು ವಿಧಧ ಪ್ರಾಸಗಳನ್ನು ಕಾಣಬಹುದು.

**ಯತಿ :** ಕಾವ್ಯವನ್ನು ಓದುವಾಗ ಉಸಿರು ತೆಗೆದು ಕೊಳ್ಳುವ ಸಲುವಾಗಿ ನಿಲ್ಲಿಸುವ ಸ್ಥಳವನ್ನು **ಯತಿ** ಎಂದು ಕರೆಯಲಾಗಿದೆ. ಹಾಗೆಂದ ಮಾತ್ರಕ್ಕೆ ನಮಗೆ ಇಷ್ಟ ಬಂದಲ್ಲಿ ನಿಲ್ಲಿಸುವ ಸ್ವಾತಂತ್ರ್ಯವಿಲ್ಲ. ಓದುವಾಗ ಅಥವಾ ಹಾಡುವಾಗ ಅರ್ಥಕ್ಕೆ ಲೋಪ ಬಾರದಂತೆ ನಿಲ್ಲಿಸಬೇಕಾದ ಅನಿವಾರ್ಯತೆಯಿದೆ. ಹೀಗೆ—

**ಕಾವ್ಯವನ್ನು ಓದುವಾಗ ಅಥವಾ ಹಾಡುವಾಗ ಅರ್ಥಕ್ಕೆ ಲೋಪಬಾರದಂತೆ ನಿಲ್ಲಿಸುವ ಸ್ಥಳವನ್ನು ಯತಿ ಎಂದು ಗುರುತಿಸಲಾಗಿದೆ.** ಕೆಲವು ಕವಿಗಳು ಯತಿಯ ಸ್ಥಾನವನ್ನು ಕೆಲವು ಸಂಕೇತಗಳೊಂದಿಗೆ ತಮ್ಮ ಕಾವ್ಯಗಳಲ್ಲಿ ಗುರುತಿಸಿದ್ದು ಕಂಡು ಬರುತ್ತದೆ. ಕನ್ನಡ ಕಾವ್ಯಗಳಲ್ಲಿ ಯತಿಯ ಬಳಕೆ ಅತ್ಯಂತ ಕಡಿಮೆಯಾಗಿದ್ದು ಸಂಸ್ಕೃತಕಾವ್ಯಗಳಲ್ಲಿ ಬಹಳಷ್ಟು ಇರುವುದನ್ನು ಗಮನಿಸಬಹುದು.

**ಗಣ : 'ಗಣ'** ಎಂದರೆ **'ಗುಂಪು'** ಅಥವಾ **'ಸಮೂಹ'** ಎಂದರ್ಥ. ಛಂದಶ್ಶಾಸ್ತ್ರದಲ್ಲಿ **'ಗಣ'** ಎಂದರೆ ಪದ್ಯದ ಪ್ರತಿ ಸಾಲಿನಲ್ಲೂ ವಿಭಾಗಿಸಲ್ಪಡುವ **ಮಾತ್ರೆ** ಅಥವಾ **ಅಕ್ಷರ** ಅಥವಾ **ಅಂಶಗಳ** ಗುಂಪು ಎಂದರ್ಥ.

ಮಾತ್ರೆಗಳ ಲೆಕ್ಕಾಚಾರದೊಂದಿಗೆ ವಿಭಾಗಿಸಲ್ಪಡುವ ಗಣವನ್ನು **ಮಾತ್ರಾಗಣ** ಎಂತಲೂ ಅಕ್ಷರಗಳ ಲೆಕ್ಕಾಚಾರಗಳೊಂದಿಗೆ ವಿಭಾಗಿಸಲ್ಪಡುವ ಗಣವನ್ನು **ಅಕ್ಷರಗಣ** ಎಂತಲೂ ಅಂಶಗಳ ಆಧಾರದಿಂದ ವಿಭಾಗಿಸಲ್ಪಡುವ ಗಣವನ್ನು **ಅಂಶಗಣ** ಎಂತಲೂ ಕರೆಯಲಾಗಿದೆ.

© KTBS not to be republished

**ಅಂಶಗಣದಲ್ಲಿ ಬ್ರಹ್ಮ, ವಿಷ್ಣು** ಮತ್ತು **ರುದ್ರ** ಎಂಬ ಮೂರು ವಿಧದ ಗಣಗಳಿವೆ. (ಇವುಗಳ ಬಗ್ಗೆ ಹೆಚ್ಚಿನ ವಿವರವನ್ನು ಮುಂದಿನ ತರಗತಿಗಳಲ್ಲಿ ತಿಳಿದುಕೊಳ್ಳಬಹುದು.)

## ಅಕ್ಷರಗಣ

ಇದರ ಹೆಸರೇ ಹೇಳುವಂತೆ ಈ ಗಣದಲ್ಲಿ ಅಕ್ಷರಗಳ ಸಂಖ್ಯೆಯೇ ಪ್ರಧಾನವಾಗಿದೆ. ಮಾತ್ರೆಗಳು ಇಂತಿಷ್ಟೇ ಇರಬೇಕು ಎಂಬ ನಿಯಮವಿಲ್ಲ. ಮೂರು ಮೂರು ಅಕ್ಷರಗಳಿಗೆ ಒಂದರಂತೆ ಗಣ ವಿಭಾಗ ಮಾಡುವ ಕ್ರಮವೇ ಅಕ್ಷರಗಣದ ಪದ್ಧತಿ. ಹೀಗೆ ಪದ್ಯದ ಸಾಲಿನಲ್ಲಿ ಬರುವ ಅಕ್ಷರಗಳನ್ನು ಮೂರು ಅಕ್ಷರಗಳಿಗೆ ಒಂದರಂತೆ ಗಣವನ್ನು ವಿಭಾಗಿಸಿದ ಬಳಿಕ ಆ ಸಾಲಿನಲ್ಲಿ ಒಂದು ಅಥವಾ ಎರಡು ಅಕ್ಷರಗಳು ಉಳಿಯಬಹುದು. ಅಂತಹ ಅಕ್ಷರಗಳನ್ನು **'ಲ', 'ಗು'** ಎಂದು ಗುರುತಿಸಲಾಗುತ್ತದೆ. ಉಳಿದಂತೆ ಗಣಗಳಾಗಿ ವಿಂಗಡಿಸಲ್ಪಟ್ಟ ಅಕ್ಷರಗಳ ಮಾತ್ರಾ ಕ್ರಮಕ್ಕನುಗುಣವಾಗಿ ಆ ಗಣಗಳಿಗೆ ಬೇರೆಬೇರೆ ಹೆಸರುಗಳಿರುತ್ತವೆ. ಈ ರೀತಿಯ ಗಣಗಳನ್ನು ಒಂದು ಸೂತ್ರವಾಕ್ಯದಿಂದ ಹೀಗೆ ಹೇಳಬಹುದು.

**ಯಮಾತಾರಾಜಭಾನಸಲಗಂ** ಎಂಬುದೇ ಆ ಸೂತ್ರವಾಕ್ಯ.

ಈ ಸೂತ್ರವಾಕ್ಯದ ಎಂಟು ಅಕ್ಷರಗಳು ಗಣಗಳ ಹೆಸರನ್ನು ಸೂಚಿಸುತ್ತವೆ. ಅವು ಇಂತಿವೆ_

| ಗಣಗಳು | ಅಕ್ಷರಗಳು | ಮಾತ್ರಾವಿನ್ಯಾಸ |
|---|---|---|
| ಯಗಣ | ಯಮಾತಾ | U – – |
| ಮಗಣ | ಮಾತಾರಾ | – – – |
| ತಗಣ | ತಾರಾಜ | – – U |
| ರಗಣ | ರಾಜಭಾ | – U – |
| ಜಗಣ | ಜಭಾನ | U – U |
| ಭಗಣ | ಭಾನಸ | – U U |
| ನಗಣ | ನಸಲ | U U U |
| ಸಗಣ | ಸಲಗಂ | U U – |

ಈ ಎಂಟು ಗಣಗಳನ್ನು ಈ ಪದ್ಯದ ಆಧಾರದಿಂದಲೂ ಗುರುತಿಸಿ ಕೊಳ್ಳಲು ಸಾಧ್ಯವಿದೆ.

ಗುರು ಲಘು ಮೂರಿರೆ ಮ – ನ – ಗಣ ।

ಗುರು ಲಘು ಮೊದಲಲ್ಲಿ ಬರಲು ಭ – ಯ – ಗಣಮೆಂಬರ್ ॥

ಗುರು ಲಘು ನಡುವಿರೆ ಜ – ರ – ಗಣ ।

ಗುರು ಲಘು ಕೊನೆಯಲ್ಲಿ ಬರಲು ಸ – ತ – ಗಣ ಮಕ್ಕುಂ ॥

ಹೀಗೆ ಅಕ್ಷರಗಣಗಳಲ್ಲಿ ಎಂಟು ವಿಧದ ಗಣಗಳನ್ನು ಕಾಣಬಹುದು.

© KTBS not to be republished

## ವೃತ್ತಗಳು

ಅಕ್ಷರಗಣಗಳ ಶಾಸ್ತ್ರಕ್ಕನುಗುಣವಾಗಿ ರಚಿಸಲ್ಪಟ್ಟ ಪದ್ಯಗಳನ್ನು **ವೃತ್ತಗಳು** ಎಂದು ಕರೆಯುತ್ತಾರೆ. ಸಂಸ್ಕೃತ ಕಾವ್ಯಗಳಲ್ಲಿ ಹಲವಾರು ವೃತ್ತಗಳು ಬಳಕೆಯಾಗಿದ್ದರೂ ಕನ್ನಡದ ಪ್ರಾಚೀನ ಕವಿಗಳು ಬಹಳವಾಗಿ ಬಳಸಿರುವುದು **ಆರು** ವೃತ್ತಗಳನ್ನು ಮಾತ್ರ ಅವುಗಳನ್ನು **ಖ್ಯಾತಕರ್ಣಾಟಕಂ** ಎಂದು ಕರೆಯಲಾಗಿದೆ. ಅವು ಇಂತಿವೆ—

ಗುರುವೊಂದಾದಿಯೊಳುತ್ಪಲಂ ಗುರುಮೊದಲ್ ಮೂರಾಗೆ ಶಾರ್ದೂಲಮಾ ।

ಗುರುನಾಲ್ಕಾಗಿರಲಂತು ಸ್ರಗ್ಧರೆ ಲಘು ದ್ವಂದ್ವಂ ಗುರುದ್ವಂದ್ವಮಾ ।

ಗಿರೆ ಮತ್ತೇಭ ಲಘುದ್ವಯ ತ್ರಿಗುರುವಿಂದಕ್ಕುಂ ಮಹಾಸ್ರಗ್ಧರಾ ।

ಹರಿಣಾಕ್ಷೀ, ಲಘು ನಾಲ್ಕು ಚಂಪಕಮಿವಾಱುಂ ಖ್ಯಾತಕರ್ಣಾಟಕಂ ॥

**ವೃತ್ತದ ಲಕ್ಷಣ :** ನಾಲ್ಕು ಪಾದಗಳಿರುತ್ತವೆ. ಅಕ್ಷರಗಳ ಸಂಖ್ಯೆ ಮತ್ತು ಗಣಗಳ ವಿಧಗಳಲ್ಲಿ ಪ್ರತಿಪಾದವೂ ಸಮಾನವಾಗಿರುತ್ತದೆ. ಆದಿಪ್ರಾಸದಿಂದ ಕೂಡಿರುತ್ತದೆ. ಪ್ರತಿಯೊಂದು ವೃತ್ತಕ್ಕೂ ಗಣಾಧಾರಿತ ನಿಯಮ ಬೇರೆಬೇರೆ ಇರುತ್ತದೆ. ಅವುಗಳನ್ನು ಆಯಾವೃತ್ತಗಳ ಲಕ್ಷಣವನ್ನು ತಿಳಿಯುವಾಗ ಗಮನಿಸೋಣ.

### ಮತ್ತೇಭವಿಕ್ರೀಡಿತ ವೃತ್ತ

**ಉದಾ :**

| ಸ | ಭ | ರ | ನ | ಮ | ಯ | ಲಗಂ |
|---|---|---|---|---|---|---|
| U U – | –U U | – U – | UUU | – – – | U– – | U– |
| ಕೆರೆಯಂ | ಕಟ್ಟಿಸು | ಬಾವಿಯಂ | ಸವೆಸು | ದೇವಾಗಾ | ರಮಂ ಮಾ | ಡಿಸ |

ಜ್ಜೆರೆಯೊಳ್.......

**ಲಕ್ಷಣ :** ಪ್ರತಿ ಪಾದದಲ್ಲೂ ಇಪ್ಪತ್ತು ಅಕ್ಷರಗಳಿವೆ. ಪ್ರತಿ ಪಾದವೂ **ಸ,ಭ,ರ,ನ,ಮ,ಯ** ಎಂಬ ಗಣಗಳಿಂದಲೂ ಕೊನೆಯಲ್ಲಿ ಒಂದು **ಲಘು** ಮತ್ತು ಒಂದು **ಗುರು**ವಿನಿಂದಲೂ ಕೂಡಿರುತ್ತದೆ. ಆದಿ ಪ್ರಾಸದಿಂದ ಕೂಡಿರುತ್ತದೆ.

**ಸೂತ್ರ : ಸಭರಂನಂಮಯಲಂಗಮುಂ ಬಗೆಗೊಳಲ್ ಮತ್ತೇಭವಿಕ್ರೀಡಿತಂ**

**ತಾಳೆ ನೋಡುವುದು :** ಈ ಸೂತ್ರಕ್ಕೆ ಪ್ರಸ್ತಾರ ಹಾಕಿ ಗಣ ವಿಭಾಗ ಮಾಡಿದಾಗಲೂ ಇದೇ ರೀತಿಯ ಗಣ ವಿನ್ಯಾಸ ಬರಬೇಕು.

| ಸ | ಭ | ರ | ನ | ಮ | ಯ | ಲಗಂ |
|---|---|---|---|---|---|---|
| U U – | – U U | – U – | U U U | – – – | U– – | U – |
| ಸಭರಂ | ನಂಮಯ | ಲಂಗಮುಂ | ಬಗೆಗೊ | ಳಲ್ಮತ್ತೇ | ಭವಿಕ್ರೀ | ಡಿತಂ |

### ಚಂಪಕಮಾಲಾ ವೃತ್ತ

**ಉದಾ:–**

| ನ | ಜ | ಭ | ಜ | ಜ | ಜ | ರ |
|---|---|---|---|---|---|---|
| UUU | U– U | – UU | U – U | U – U | U – U | – U – |
| ಎನೆನ | ಸುನಕ್ಕು | ಮಾರರಿ | ಪುವಾತ | ನ ಧೈರ್ಯ | ಮನಾತ | ನೇಳ್ಗೆವೆ |

ತ್ತನುಗತ.....

© KTBS not to be republished

**ಲಕ್ಷಣ :–** ಪ್ರತಿಪಾದಲ್ಲೂ ಇಪ್ಪತ್ತೊಂದು ಅಕ್ಷರಗಳಿವೆ. ಪ್ರತಿಪಾದವೂ **ನ, ಜ, ಭ, ಜ, ಜ, ಜ, ರ** ಎಂಬ ಗಣಗಳಿಂದ ಕೂಡಿದೆ. ಆದಿ ಪ್ರಾಸದಿಂದ ಕೂಡಿರುತ್ತದೆ.

**ಸೂತ್ರ :– ನಜಭಜಜಂಜರಂ ಬಗೆಗೊಳುತ್ತಿರೆ ಚಂಪಕ ಮಾಲೆಯೆಂದಪರ್**

**ಭಾಷಾ ಚಟುವಟಿಕೆ**

೧. **ಕೊಟ್ಟಿರುವ ಪದ್ಯದ ಸಾಲುಗಳಿಗೆ ಗಣ ವಿಭಾಗ ಮಾಡಿ ಪ್ರಸ್ತಾರ ಹಾಕಿ ಛಂದಸ್ಸನ್ನು ಹೆಸರಿಸಿ ಲಕ್ಷಣ ಬರೆಯಿರಿ.**

ಅ. ಎನಗಂ ಪಾಂಡುಗಮಿಲ್ಲ ಭೇದ ಮಿಳೆಯಂ ಪಚ್ಚಾಳ್ವಮಾ ಪಾಂಡುನಂ

ಆ. ಕುರುಕುಳನಂದನಂ ಪವನನಂದನನೆಂಬ ಮದಾಂಧ ಗಂಧಸಿಂ

೨. ಅ. **ತತ್ಸಮ–ತದ್ಭವ ಬರೆಯಿರಿ.**

ಅಮೃತ, ಕಾರ್ಯ, ದೀವಿಗೆ, ಪುಣ್ಯ, ಕಣಿ.

ಆ. **ವಿಗ್ರಹಿಸಿ ಸಮಾಸವನ್ನು ಹೆಸರಿಸಿ.**

ಪೆರ್ಮಗ, ಘಟಸಂಭೂತ, ಗಾಂಡಿವಿ, ಪವನನಂದನ, ಮದಾಂಧ, ಪೆರ್ಮರ.

**ಚಟುವಟಿಕೆ**

**ಕಂಠಪಾಠ ಮಾಡಿ:–**

– ನೀನು_ _ _ _ _ _ _ _ _ _ _ _ _ _ _ _ ನಂದಿದೊಡೇಂ.

– ಕುರುಕುಳ_ _ _ _ _ _ _ _ _ _ _ _ _ _ _ _ ತಂದೆಗಿಂಬುಕೆಯ್.

* * * * *

© KTBS not to be republished